**ಸಾಕ್ಷಿಯನ್ನು ದಿಃ *14/07/2026* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
***ಪಾಟೀ ಸವಾಲು : ಶ್ರೀ ಎಸಬಿಎಂ ವಾದಿ ಪರ ವಕೀಲರಿಂದ.***

ನಾನು ನನ್ನ ಮದುವೆಯ ಮೊದಲು ಅಮ್ಮಿನಬಾವಿ ಗ್ರಾಮದಲ್ಲಿ ನನ್ನ ಅಜ್ಜ ಭೀಮಪ್ಪ ಅಂದರೆ ನನ್ನ ತಾಯಿಯ ತಂದೆಯ ಮನೆಯಲ್ಲಿ ವಾಸವಿದ್ದೆ. ಸದರಿ ಭೀಮಪ್ಪ ನಾನು ಜನಿಸುವ ಮೊದಲೇ ಮರಣ ಹೊಂದಿದ್ದರು ಎಂದು ತಿಳಿದುಕೊಂಡಿದ್ದೇನೆ. ನನ್ನ ಅಜ್ಜಿಯ ಹೆಸರು ಸಿದ್ದಮ್ಮ. ನನ್ನ ಅಜ್ಜಿ ಸಿದ್ದಮ್ಮ ಮರಣ ಹೊಂದಿದ ದಿನಾಂಕ ನನಗೆ ಗೊತ್ತಿಲ್ಲ. ಸದರಿ ಭೀಮಪ್ಪ ಮತ್ತು ಸಿದ್ದಮ್ಮ ಇವರಿಗೆ ಮೂರು ಜನ ಮಕ್ಕಳು, ಅವರು ಎಂದರೆ ಬಸವ್ವ, ಮಹಾದೇವಿ ಮತ್ತು ಚೆಂಬಮ್ಮ ಇರುತ್ತಾರೆ. ಬಸವ್ವ ಇವರು ನನ್ನ ತಾಯಿ ಎಂದರೆ ಸರಿ. ನನ್ನ ತಾಯಿ ನಾನು ಆರು ವರ್ಷದವಳು ಇದ್ದಾಗ ಮರಣ ಹೊಂದಿದ್ದಾಳೆ. ಬಸವ್ವ ಇವರಿಗೆ ನಾನು ಮತ್ತು 1ನೇ ಪ್ರತಿವಾದಿ ನನ್ನ ತಾಯಿ ಬಸವ್ವ ಇವರ ಮಕ್ಕಳು ಇರುತ್ತೇವೆ. ನನ್ನ ತಂದೆ ಈಗ ಮರಣ ಹೊಂದಿದ್ದಾರೆ ಎಂದರೆ ಸರಿ. ಮಹಾದೇವಿ ಇವರಿಗೆ ಮಕ್ಕಳು ಇಲ್ಲ.

ಈ ದಾವೆಯಲ್ಲಿ ಯಾವ ಯಾವ ಆಸ್ತಿಗಳು ಒಳಗೊಂಡಿವೆ ಎಂದು ಹೇಳಲು ಆಗುವುದಿಲ್ಲ. ದಾವಾ ಆಸ್ತಿಗಳು ನನ್ನ ಅಜ್ಜ ಭೀಮಪ್ಪನಿಂದ ಬಂದ ಆಸ್ತಿಗಳು ಆಗಿರುತ್ತವೆ. ಭೀಮಪ್ಪನ ಮರಣದ ನಂತರ ನಾವುಗಳು ಅವರ ವಾರಸಾ ನಾತೇಯಿಂದ ದಾವಾ ಸ್ವತ್ತಿಗೆ ಹಕ್ಕುದಾರರು ಆಗಿದ್ದೇವೆ ಎಂದರೆ ಸರಿ.

ನನ್ನ ತವರುಮನೆ ಧಾರವಾಡ ತಾಲೂಕಿನ ಕಲ್ಲೂರ ಗ್ರಾಮ ಇರುತ್ತದೆ. ನನ್ನ ತಂದೆ ಮರಣ ಹೊಂದಿ 4-5 ವರ್ಷಗಳಾಗಿವೆ. ದಾವಾ ಆಸ್ತಿಗೂ ಮತ್ತು ಕಲ್ಲೂರ ಗ್ರಾಮದ ಆಸ್ತಿಗೆ ಯಾವುದೇ ಸಂಬಂಧವಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿದಾರರು ಉತ್ತರಿಸುವುದಿಲ್ಲ. ದಾವಾ ಸ್ವತ್ತು ನಮಗೆ ಸ್ತ್ರೀ ಧನ ಆಸ್ತಿ ಆಗುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿದಾರರು ಉತ್ತರಿಸುವುದಿಲ್ಲ. ದಾವಾ ಸ್ವತ್ತುಗಳನ್ನು ಕಬಳಿಸಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ದಾವಾ ಸ್ವತ್ತಿನಲ್ಲಿ ಕಾನೂನುಬದ್ದ 1/6 ಹಿಸ್ಸೆ ಬರುತ್ತದೆ ಎಂದರೆ ಸರಿಯಲ್ಲ.

***ಪಾಟೀ ಸವಾಲು : 2 ಮತ್ತು 3 ನೇ ಪ್ರತಿವಾದಿ ಮತ್ತು ಅವರ ಪರ ವಕೀಲರನ್ನು ಕೂಗಿಸಲಾಯಿತು. ಗೈರು ಹಾಜರು ಇದ್ದಾರೆ. ಕೋರಿಕೆ ಇಲ್ಲ. ಕಾರಣ ಅವರ ಪರ ಪಾಟೀ ಸವಾಲು ಇರುವುದಿಲ್ಲ ಎಂದು ಪರಿಗಣಿಸಲಾಯಿತು.***

***ಮರು ವಿಚಾರಣೆ : ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,

ಧಾರವಾಡ.